**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**

**ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ , ಭಟ್ಕಳ**

**ಎಂವಿಸಿ ನಂ.28/2023**

**ಪಿಡಬ್ಲ್ಯೂ: 2**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕ: 06-03-2026**

| | | |
|---|---|---|
| **ಹೆಸರು** | : | ಡಾ. ದಿನೇಶ ಕುಮಾರ ಶೆಟ್ಟಿ |
| **ತಂದೆಯ ಹೆಸರು** | : | ಜಗನ್ನಾಥ ಶೆಟ್ಟಿ |
| **ವಯಸ್ಸು** | : | 57 ವರ್ಷ |
| **ಉದ್ಯೋಗ** | : | ಕೀಲು ಮೂಳೆ ತಜ್ಞರು |
| **ವಾಸ** | : | ಚಿನ್ಮಯಿ ಆಸ್ಪತ್ರೆ, ಕುಂದಾಪುರ |

**ಈ ಪ್ರಕರಣದಲ್ಲಿ ಸದರಿ ಸಾಕ್ಷಿಯು ವೈದ್ಯರಿದ್ದು ಅರ್ಜಿದಾರ ಮತ್ತು ಎದುರುದಾರ ವಕೀಲರ ಸಮ್ಮತಿ ಮೇರೆಗೆ ನ್ಯಾಯಾಲಯ ಮತ್ತು ವೈದ್ಯರ ಸಮಯ, ವೆಚ್ಚವನ್ನು ಗಮದಲ್ಲಿಟ್ಟುಕೊಂಡು ಸದರಿ ಸಾಕ್ಷಿಯನ್ನು ಉಚ್ಚ ನ್ಯಾಯಾಲಯದ ನಿಯಮಾವಳಿ ಪ್ರಕಾರ ಸಾಕ್ಷಿಯನ್ನು ವಿ.ಸಿ ಮುಖಾಂತರ ದಾಖಲಿಸಿಕೊಳ್ಳಲಾಗಿದೆ. ಸದರಿ ಸಾಕ್ಷಿಯ ಸಹಿಯನ್ನು ಪ್ರಮಾಣ ಪತ್ರದ ಮೇಲೆ ಇಮೇಲ್ ಮುಖಾಂತರ ಸಾಕ್ಷಿಗೆ ಕುಳುಹಿಸಿ ಅವರು ಸಹಿ ಮಾಡಿ ಕಳುಹಿಸಿದ್ದನ್ನು ಕಡತಕ್ಕೆ ಅಳವಡಿಸಿಕೊಳ್ಳಲಾಗಿದೆ.**

**ಮುಖ್ಯ ವಿಚಾರಣೆ: ವಿ.ಸಿ ಮುಖಾಂತರ ಶ್ರೀ ಜಿ.ಎಂ.ಎಂ. ವಕೀಲರಿಂದ :-**

ನಾನು ಸುಮಾರು 25 ವರ್ಷದಿಂದ ಚಿನ್ಮಯಿ ಆಸ್ಪತ್ರೆ, ಕುಂದಾಪುರದಲ್ಲಿ ಕೀಲು ಮೂಳೆ ತಜ್ಞನಾಗಿ ಕೆಲಸ ಮಾಡುತ್ತಿದ್ದೇನೆ.

ಈ ಪ್ರಕರಣದ ಅರ್ಜಿದಾರರು ದಿನಾಂಕ 06.05.2022 ರಂದು ವಾಹನ ಅಪಘಾತದಲ್ಲಿ ಗಾಯಗೊಂಡು ನಮ್ಮ ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು ಬಂದಿದ್ದರು. ಅರ್ಜಿದಾರನನ್ನು ನಾನು ಪರೀಕ್ಷಿಸಿದಾಗ ಅವರ ಬಲಗೈ ಮಣಿಗಂಟು ಮೂಳೆ ಮುರಿದಿತ್ತು. ಅದೇ ರೀತಿ ಬಲಭಾಗದ ಮೂಳೆ ಮುರಿದಿತ್ತು. ಎರಡು ಗಾಯಗಳಿಗೆ ಪಿಒಪಿ ಪ್ಲಾಸ್ಟರ್ ಹಾಕಲಾಯಿತು. ದಿನಾಂಕ 09.05.2022 ರಂದು ಅರ್ಜಿದಾರರನನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು. 45 ದಿನಗಳ ನಂತರ ಅರ್ಜಿದಾರನಿಗೆ ಹಾಕಿದ ಪ್ಲಾಸ್ಟರ ತೆಗೆಯಲಾಯಿತು.

ದಿನಾಂಕ 25.06.2023 ರಂದು ಅರ್ಜಿದಾರ ಅಂಗನ್ಯೂನ್ಯತೆ ಪ್ರಮಾಣ ಪತ್ರ ಪಡೆಯಲು ಆಸ್ಪತ್ರೆಗೆ ಬಂದಾಗ ಆತನನ್ನು ಪರೀಕ್ಷಿಸಿದಾಗ ಅರ್ಜಿದಾರನ ಬಲಗೈ ಮಣಿಗಂಟಿನ ಚಲನವಲನ ಶೇಕಡಾ 20 ರಷ್ಟು ಕುಂಠಿತವಾಗಿತ್ತು ಮತ್ತು ಒಳ ಮತ್ತು ಹೊರ ತಿರುಗುವಿಕೆ ಶೇಕಡಾ 20 ರಷ್ಟು ಕುಂಠಿತವಾಗಿತ್ತು. ಅದೇ ರೀತಿ ಬಲಗಾಲಿನ ಪಾದಕ್ಕೆ ಸುಮಾರು 30 ರಷ್ಟು ತಿರುಗುವಿಕೆಯಲ್ಲಿ ಕುಂಠಿತ ಆಗಿತ್ತು. ಇದರಿಂದಾಗಿ ಅರ್ಜಿದಾರನ ಬಲಗೈಗೆ ಶೇಕಡಾ 10 ರಷ್ಟು ಮತ್ತು ಬಲಗಾಲಿನ ಗಾಯಕ್ಕೆ ಶೇಕಡಾ 10 ರಷ್ಟು ಅಂಗನ್ಯೂನ್ಯತೆ ಆಗಿರುತ್ತದೆ. ಆ ಬಗ್ಗೆ ನಾನು ಪ್ರಮಾಣ ಪತ್ರ ನೀಡಿರುತ್ತೇನೆ. ಸದ್ರಿ ದಾಖಲೆಯನ್ನು ವಿಸಿ

**ಪಿಡಬ್ಲುಃ 2**

ಮುಖಾಂತರ ನೊಡುತ್ತಿದ್ದು ಅದನ್ನು ಈಗಾಗಲೇ ನಿಪಿ–11 ಎಂದು, ಸಾಕ್ಷಿಯ ಸಹಿಯನ್ನು ನಿಪಿ–11(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2ನೇ ಎದ್ರುದಾರರ ಪರ ಶ್ರೀ ಎಸ್ ಎಮ್ ಬಿ ವಕೀಲರಿಂದ :–**

ಅರ್ಜಿದಾರರಿಗೆ ಯಾವುದೇ ಶಸ್ತ್ರ ಚಿಕಿತ್ಸೆ ಮಾಡಿಲ್ಲ ಎಂದರೆ ಸರಿ. ಅರ್ಜಿದಾರನ ಎಕ್ಸರೇ ತೆಗೆದಿರುತ್ತೇವೆ ಆದರೆ ಅದರ ವರದಿಯನ್ನು ಪಡೆದುಕೊಂಡಿಲ್ಲ ಎಂದರೆ ಸರಿ. ಅರ್ಜಿದಾರನ ಎಕ್ಸರೇ ರಿಪೋರ್ಟನ್ನು ಪಡೆದುಕೊಂಡರೆ ನಿಜ ಸಂಗತಿ ಗೊತ್ತಾಗುತ್ತದೆ ಎಂದು ಅದನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅಂಗನ್ಯೂನ್ಯತೆ ಪ್ರಮಾಣ ಪತ್ರದಲ್ಲಿ ಬರೆದಂತೆ ಆಸ್ಪತ್ರೆಯ ದಾಖಲೆಗಳಲ್ಲಿ ಬರೆದಿಲ್ಲ ಎಂದರೆ ಸರಿ. ಅರ್ಜಿದಾರನಿಗೆ ನ್ಯೂನ್ಯತೆ ಇದ್ದಿದ್ದರೆ ನಾನು ಅರ್ಜಿದಾರನನ್ನು ಹೆಚ್ಚಿನ ಚಿಕಿತ್ಸೆಗೆ ಸಲಹೆ ನೀಡುತ್ತಿದ್ದೆನು ಮತ್ತು ಅದನ್ನು ಹೊರರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದಾಗ ಸದ್ರಿ ಆಸ್ಪತ್ರೆಯ ದಾಖಲೆಗಳಲ್ಲಿ ಬರೆಯುತ್ತಿದ್ದೆವು ಎಂದರೆ ಸರಿಯಲ್ಲ.

ಅರ್ಜಿದಾರ ಕೊನೆಯ ಬಾರಿಗೆ ದಿನಾಂಕ 09.07.2022 ರಂದು ಆಸ್ಪತ್ರೆಗೆ ಬಂದಿದ್ದರು. ಅರ್ಜಿದಾರ ಬೇರೆ ಯಾವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಅರ್ಜಿದಾರ ನಮ್ಮ ಆಸ್ಪತ್ರೆಗೆ ಎರಡು ಬಾರಿ ಮಾತ್ರ ಹೊರರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿದ್ದಾರೆ ಎಂದರೆ ಸರಿ. ನಿಪಿ–11 ರಲ್ಲಿ ಹೇಳಿದ ಯಾವುದೇ ಅಂಗನ್ಯೂನ್ಯತೆ ಅರ್ಜಿದಾರನಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–11ರಲ್ಲಿ ಯಾವ ಮಾರ್ಗಸೂಚನೆಯಂತೆ ಅಂಗನ್ಯೂನ್ಯತೆ ಲೆಕ್ಕ ಹಾಕಿದೆ ಎಂದು ಬರೆದಿಲ್ಲ ಎಂದರೆ ಸರಿ. ಭಾರತ ಸರಕಾರ ಹೊರಡಿಸಿದ ಮಾರ್ಗಸೂಚನೆಯಂತೆ ನಿಪಿ–11 ನ್ನು ತಯಾರಿಸಲಾಗಿದೆ ಎಂದು ಬರೆದಿಲ್ಲ ಎಂದರೆ ಸರಿ. ಭಾರತ ಸರಕಾರ ಹೊರಡಿಸಿದ ಮಾರ್ಗಸೂಚನೆಯಂತೆ ಲೆಕ್ಕ ಹಾಕಿದರೆ ಅರ್ಜಿದಾರನಿಗೆ ನಿಪಿ–11ರಲ್ಲಿ ಹೇಳಿದಷ್ಟು ಅಂಗನ್ಯೂನ್ಯತೆ ಬರುವುದಿಲ್ಲ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ನಿಪಿ–11 ರಲ್ಲಿ ಮಾರ್ಗಸೂಚಿಯಲ್ಲಿರುವ ಸೂತ್ರವನ್ನು ಬಳಸದೇ ಸುಳ್ಳು ಪ್ರಮಾಣ ಪತ್ರ ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಯಾವುದೇ ಅಂಗನ್ಯೂನ್ಯತೆ ಇರುವುದಿಲ್ಲ, ಅರ್ಜಿದಾರ ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಕ್ಕೆ ಅರ್ಜಿದಾರನಿಗೆ ಹೆಚ್ಚಿನ ಪರಿಹಾರ ಪಡೆದುಕೊಳ್ಳಲು ನಿಪಿ–11 ರಂತೆ ಸುಳ್ಳು ಪ್ರಮಾಣ ಪತ್ರ ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**1ನೇ ಎದುರುದಾರ ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದ ಕಾರಣ ಅವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆ – ಇಲ್ಲ.**

**(ತೆ. ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**Sd/–**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**